Regd No. M 1299 SATYAVADI Founded 1

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 31 ಸಂಚಿಕೆ 31] ಮಂಗಳವಾರ 4—11—47 [ಬಿಡಿ ಪ್ರತಿ 3 ಪೈ

ಲಕ್ಷ ಮುಸ್ಲಿಂರು ಕಾಂಗೆಸ್ ಸೇರಿದರು

ಶ್ರೀ ಸಿದ್ದಲಿಂಗಯ್ಯನವರ ಸಿಂಹನಾದ

ದಿವಾನರು ಎರಡು ಮೂರು ತಿಂಗಳಲ್ಲೇ ಸಂಸ್ಥಾನವನ್ನು ಬಿಟ್ಟು ಹೋಗತ್ತಾರೆ — ಶ್ರೀಮನ್ಮಹಾರಾಜರವರ ರಾಜಧನವನ್ನು 27 ಲಕ್ಷದಿಂದ 40 ಲಕ್ಷ ರೂ. ಗೆ ಏರಿಸಲಾಗಿದೆಯೆಂಬ ಸುದ್ದಿ ಸತ್ಯವಾಗಿದ್ದಲ್ಲಿ ಶ್ರೀಮನ್ಮಹಾರಾಜರು ನಾಡಿನ ಆರ್ಥಿಕಸ್ಥಿತಿಯನ್ನಾದರೂ ಗಮನಿಸಿ ಈಗ ತಾವು ಪಡೆಯುತ್ತಿರುವ 27 ಲಕ್ಷ ರೂ ಗಳನ್ನು ಸಹಕಡಮೆ ಮಾಡಿಕೊಳ್ಳಬೇಕು —ನೂತನ ಸರಕಾರವು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಹೊರಡಿಸಲ್ಪಟ್ಟ ಆಜ್ಞೆಗಳು ಪುನರ್ವಿವರ್ಶಿಸಲಾಗುವುದು — ಎಂಬುವಾಗಿ ಶ್ರೀ ಸಿದ್ಧಲಿಂಗಯ್ಯನವರು ಬೆಂಗಳೂರಿನಲ್ಲಿ ಮಾಡಿದ ಭಾಷಣದಲ್ಲಿ ತಿಳಿರಿದರು.

ಪಾಟ್ನಾ ದರ್ಭಾಂಗಾ ಡಿಸ್ಟ್ರಿಕ್ಟ್‌ನಲ್ಲಿ 1 ಲಕ್ಷ ಮುಂದಿ ಮುಸ್ಲಿಂರು ಕಾಂಗ್ರೆಸ್ಸಿಗೆ ಸೇರಿದವರು.

ನವದೆಹಲಿ ನ 2— ಭಾರತ ಸರಕಾರವು ಒಟ್ಟಿ ತಯಾರಿಕೆಯನ್ನು 800 ಮಿಲಿಯ ಗಜ ಹೆಚ್ಚಿಸುವರು.

ಅನಂತಪುರ ನ 2 — ಹೈದರಾಬಾದಿಗೆ ಮುಸ್ಲಿಂರಿರದ ತುಂಬಿ ಬರುತ್ತಿದ್ದ ಜೀಪ್‌ಗಳು ತಡೆಯಲ್ಪಟ್ಟಿವೆ.

ಜುಲೈನಿಂದ 1 ರಿಂದ ಸ್ಯಾಲಿಸ್ಬೆರ್ಯ್ ವಿಭಜನೆಯನ್ನು ಅಮೇರಿಕಾ ಸೂಚಿಸಿದೆ.

ನವದೆಹಲಿ ನ 2 — ಧಾಳಿಗಳನ್ನು ಪಾಕಿಸ್ತಾನ ಪ್ರೋತ್ಸಾಹಿಸುತ್ತಿದೆ ಎಂದಿರುವರು ಗಾಂಧೀಜಿ.

ನವದೆಹಲಿ ನ 3.... ಭಾರತ ಸ್ಟರ್ಲಿಂಗ್ ರವು 15 ವರ್ಷ ವಾಯಿದೆಯ ಹೊಸ ಸಾಲ ತೆಗೆದುಕೊಳ್ಳುವುದು.

ಮೈಸೂರು ಸಿಟಿ ಮುನಿಸಿಪಲ್ ವೈಸ್‌ಪ್ರೆಸಿಡೆಂಟ್ ರವರ ಆಫೀಸಿನಿಂದಾ—

ಇದರಿಂದ ಮೈಸೂರಿನ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

1947 ನೇ ನವೆಂಬರ್ ತಾರೀಖು 5 ನೇ ಬುಧವಾರ ಬೆಳಿಗ್ಗೆ 10 ಗಂಟೆ ಯಿಂದ ಮಧ್ಯಾಹ್ನ 4 ಗಂಟೆವರೆವಿಗೆ ನೀರಿನ ಟ್ಯಾಂಕುಗಳನ್ನು ರಿಪೇರಿ ಮಾಡ ಬೇಕಾಗಿರುವುದರಿಂದ ಆ ಕಾಲದಲ್ಲಿ ನೀರಿನ ಸರಬರಾಜನ್ನು ನಿಲ್ಲಿಸಲಾಗುತ್ತೆ. ಎಲ್ಲಾ ಪುರಜನರಿಗೂ ಇದಕ್ಕೆ ಮುಂಚಿತವಾಗಿ ನೀರನ್ನು ಶೇಖರಿಸಿಕೊಳ್ಳ ಬೇಕಾಗಿ ಈ ಮೂಲಕ ತಿಳಿಯಪಡಿಸಿದೆ.

(ಸಹಿ) ಟಿ. ನರಸಿಂಹಯ್ಯಂಗಾರ್

ತಾ || 3—11—47 ವೈಸ್‌ಪ್ರೆಸಿಡೆಂಟ್

Edited, Printed and Published by M. S Krishna Rao at the Satyavadi Press Chamaarja Agahar Myrsore.

ಹೈದರಾಬಾದ್ ರಣಕಹಳೆ

ನಿಜಾಂ ಪೋಲೀಸರ ನಿರಂಕುಶ ಆಡಳಿತ

ಔರಂಗಾಬಾದ್ ನ 1 — ಹೈದರಾಬಾದ್ ನಿಜಾಮರ ನಿರಂಕುಶಾಧಿಕಾರ ನಿರ್ನಾಮದ ಬಗ್ಗೆ ಹಿಂದೂ ವಿದ್ಯಾರ್ಥಿಗಳೆಲ್ಲರೂ ಸತ್ಯಾಗ್ರಹ ರಣಕ್ಕೆಳೆದು ಶಾಲಾಕಾಲೇಜುಗಳಿಗೆ ಬಹಿಷ್ಕರಿಸಿದರು

ಹೈದರಾಬಾದು ನಿಜಾಮರ ಗೂಡಾಚಾರರುಗಳು ಭಾರತ ಪ್ರದೇಶದಲ್ಲಿದ್ದುದನ್ನು ಪತ್ತೆ ಹಚ್ಚಿ ಡುಸ್ತಗಿರಿ ಮಾಡಲಾಗಿದೆ

ನಿಜಾಂ ಪೋಲೀಸರು ಭಾರತ್ ಟಾಕೀಸಿನಲ್ಲಿ ಪ್ರದರ್ಶಿಸಲ್ಪಡುತ್ತಿರುವ ಪಂಜಾಬ್ ಮೇಲ್ ಎಂಬ ಚಿತ್ರದಲ್ಲಿ ಗಾಂಧೀಜಿ ಭಾವಚಿತ್ರ ಹೂ ಮಾಲೆಯಿಂದ ಶೋಭಿಸುತ್ತಿರುವ ದೃಶ್ಯವನ್ನು ಕತ್ತರಿಸಿ ಹಾಕಬೇಕೆಂದು ಆಜ್ಞೆ ಮಾಡಿದ್ದಾರೆ

ರಾಜಬಂದಿಗಳ ಬಿಡುಗಡೆ

ಎಲ್ಲ ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಲಾಗುವುದು ಎಂದು ಪೂರ್ವ ಬಂಗಾಳ ವ್ಯಧಾನಿ ನಾಜಿಮುದ್ದೀನ್ ತಿಳಿಸಿದ್ದಾರೆ

ಸುಗ್ರೀವಾಜ್ಞೆ ಜಾರಿಯಾಯಿತು

ಜಿ || ಜಿನ್ನಾ ಸಾರ್ವಜನಿಕ ರಕ್ಷಣೆಗಾಗಿ ಬೆಲೂಚಿಸ್ತಾನದಲ್ಲಿ ಸುಗ್ರೀವಾಜ್ಞೆ ಜಾರಿ ಮಾಡಿ ಪೋಲೀಸರಿಗೆ ಹೆಚ್ಚು ಅಧಿಕಾರ, ಆಸ್ತಿಗಳ ಮುಟ್ಟುಗೋಲು ಮುಂತಾದ ತಾತ್ಕಾಲಿಕ ಶಾಸನ ಜಾರಿ ಮಾಡಿದ್ದಾರೆ

ನಿರ್ಣಯಾಂಗೀಕಾರ

ಲೇಕ್‌ಸಕ್ಸಸ್, ನ 2 — ಕಾದಿರುವ ವಿಶ್ವ ಸಂಸ್ಥೆಯ ಅಧಿವೇಶನದಲ್ಲಿ ನೈಋತ್ಯ ಆಫ್ರಿಕ ದೇಶವನ್ನು ಧರ್ಮದರ್ಶಿತ್ವದಲ್ಲಿ ಆಡಳಿತ ನಡೆಸಬೇಕು ಎಂಬ ವಿಷಯದ ಪರಿಶೀಲನೆಯಾಗಬೇಕು ಎಂಬ ಭಾರತದ ನಿರ್ಣಯ 30 ಮತದಿಂದ ವಿಜಯವನ್ನು ಹಡೆಯಿತು

ನಿಜಾಮರಿಗೆ ಸೊಸೆಯಿಂದ ಬುದ್ಧಿವಾದ ?

ಲಂಡನ್ — ಪೇರಿಸ್‌ನಲ್ಲಿರುವ ಹೈದರಾಬಾದು ನಿಜಾಮರ ಹಿರಿಯ ಸೊಸೆ ರಾಜಕುಮಾರಿ ದರ್ಶಾವಾರವರು ಇತ್ತೀಚೆಗೆ ನಿಜಾಮರಿಗೆ ತಾರು ಕಳಿಸಿ ಭಾರತ ವಸಾಹತಿಗೆ ಸೇರಬೇಕೆಂದು ತಿಳಿಸಿ, ತನ್ನ ತಂದೆಯಾದ ಟರ್ಕಿಯ ಕಡೆಯ ಖಲೀಫನಿಗೊದಗಿದ ದುರದೃಷ್ಟವನ್ನು ಸ್ಮರಣೆಗೆ ತಂದಿರುಳರು ಎಂದು ಗೊತ್ತಾಗಿದೆ

ಫ್ಲಸಿಂಗ್‌ಮೆಡೋಸ್, — ನೈರುತ್ಯ ಆಫ್ರಿಕವನ್ನು ಧರ್ಮದರ್ಶಿತ್ವಕ್ಕೆ ಬಿಡುವ ಒಪ್ಪಂದವನ್ನೇ ದಕ್ಷಿಣ ಆಫ್ರಿಕ ಅಂಗೀಕರಿಸುವುದಿಲ್ಲವೆಂದು ಅಲ್ಲಿಯ ಪ್ರತಿನಿಧಿ ತಿಳಿಸಿದರು

ಜಲಂಧರ್ — ಅಂಬಾಲ ವಿಭಾಗದ ಪಾಕೀಸ್ತಾನಕ್ಕೆ ಹೋಗಲಿರುವ ಹಿಂದೂ ಮುಸ್ಲಿಮರು ಬೆಳೆ ಮನೆ ಇತ್ಯಾದಿಗಳನ್ನು ನಾಶಪಡಿಸುತ್ತಿರುವರೆಂದು ಅಧಿಕೃತ ಸುದ್ದಿ ಬಂದಿದೆ

ರಾಜಕೋಟೆ — ಹಲವು ಪರತ್ತಿನ ಆಧಾರದ ಮೇಲೆ ಜುನಘಡ ಭಾರತ ವಸಾಹತಿಗೆ ಸೇರುವ ಒಗೆಗೆ ಜಮಾಯಿತ್ ಮುಸ್ಲಿಂ ಶಾಖಾಲದಾಸ್ ಗಾಂಧಿಯವರಿಗೆ ಮನವಿ ಅರ್ಪಿಸಲಿದ್ದಾರೆ

ಪಾಕೀಸ್ತಾನಕ್ಕೆ ಆಫ್ರಿಕದ ಸಹಾನುಭೂತಿ ಇಲ್ಲ

ಜೋಹಾನ್‌ಬರ್ಗ್ — ದಕ್ಷಿಣ ಆಫ್ರಿಕ ಪ್ರಜಾಗಳ ಕಾಶ್ಮೀರದ ಬಗ್ಗೆ ಪಾಕೀಸ್ತಾನ ಕಾರ್ಯಾಚರಣೆಯನ್ನು ಕಂಡು ಪಾಕೀಸ್ತಾನದ ಬೇಲಿದ್ದ ಸಹಾನುಭೂತಿಯನ್ನು ತ್ಯಜಿಸಿದ್ದಾರೆ

ವಿವಿಧ ವರ್ತಮಾನ

ಕಾಶ್ಮೀರ ಪರಿಸ್ಥಿತಿ ಭೀಕರವಾಗಿದ್ದು ಅದು ಕ್ಷಿಪ್ರದಲ್ಲೇ ಭಾರಿ ರಣಕ್ಷೇತ್ರವಾಗುವ ಸಂಭವವಿದೆ. ಧಾಳಿಕಾರರಿಗೆ ಬೆಂಬಲವೀಯುವವರನ್ನು ದೇಶದ್ರೋಹಿಗಳೆಂದು ಭಾವಿಸಿ ದೇಶದ್ರೋಹಿಗಳಿಗೆ ವಿಧಿಸುವ ಶಿಕ್ಷೆ ವಿಧಿಸಲಾಗುವುದೆಂದು ಷೇಕ್ ಅಬ್ದುಲ್ಲಾರವರೆಂದಿರುವರು.

ಂ ಂ

ಬೆಂಗಳೂರು ನ 1 — ಹರಿಜನರನ್ನು ಬಿಡದ ದೇವಾಲಯಗಳಿಗೆ ಶಾವು ಪ್ರವೇಶಿಸುವುದಿಲ್ಲವೆಂದು ನೂತನ ಮಂತ್ರಿಗಳು ಸಂಕಲ್ಪಿಸಿರುವ ವಿಷಯವನ್ನು ಶ್ರೀ ದಾಸಪ್ಪ ಮಂತ್ರಿಗಳು ತಮ್ಮ ಹೊಸನ ಜಿಲ್ಲಾ ಪ್ರವಾಸ ಕಾಲದಲ್ಲಿ ತಿಳಿಸಿರುವರು.

ಂ ಂ

ಬಾಗ್ದಾಡ್ ನ 2 — ಪ್ಯಾಲಿಸ್ಟೈನು ಗಡಿಯಲ್ಲಿ ಅರಬ್ ಸೈನ್ಯ ಸಂಗ್ರಹಿಸಲಾಗುತ್ತಿದೆಯೆಂದೂ, ಪ್ಯಾಲಿಸ್ಟೈನ್ ವಿಭಜನೆ ಎದುರಿಸಲೆಂದೂ ಹೇಳಲಾಗಿದೆ.

ಂ ಂ

ಬೆಂಗಳೂರು ನ 3— ನಮ್ಮ ಸಂಸ್ಥಾನಕ್ಕೆ ಈ ತಿಂಗಳಲ್ಲಿ ಭಾರತ ಸರಕಾರವು 6 ಸಾವಿರ ಟನ್ ಧಾನ್ಯ ನಿಗದಿ ಮಾಡಿದೆ.

ಂ ಂ

ಲಂಡನ್ ನ 2— ಒರ್ಮಾ ಸ್ವತಂತ್ರವಾದ ವಿಷಯದಲ್ಲಿ ಮುಂದಿನ ಬುಧವಾರದ ಕಾಮನ್ಸು ಚರ್ಚೆಯಲ್ಲಿ ಚರ್ಚಿಲ್ಲರು ಪ್ರತಿಭಟಿಸುವರಂತೆ.

ಂ ಂ

ಬೆಂಗಳೂರು ನ2—ಮಾಜಿ ಮಂತ್ರಿ ಇಮಾಂರವರು ಕೊಟ್ಟಿರುವ ಹೇಳಿಕೆಯಲ್ಲಿ ಭಾರತ ಯೂನಿಯನ್ನಿಂದಿಗೆ ನಿಷ್ಪೃಯಿಂದ ವರ್ತಿಸಬೇಕೆಂದಿರುವರು.

ಂ ಂ

ಬೆಂಗಳೂರು ನ 3— ವೈಸ್ರಾಯರು ಸಂಸ್ಥಾನಕ್ಕೆ ಮದಂತಾಸಿನಿಂದ 2 ಲಕ್ಷ ಬೊಂಬಾಯಿನಿಂದ 2 ಲಕ್ಷ ಪಲ್ಲ ಧಾನ್ಯ ಬರಲಿರುವುದೆಂದು ಹೇಳಲಾಗಿದೆ.

ಂ ಂ

ಲಕ್ನೋ ನ 2— ಪಟ್ಟಣ ಪಾಕಿಸ್ತಾನಕ್ಕೆ ತೆರಳುತ್ತಿದ್ದ ಗುಡ್ಸ್ ವ್ಯಾಗನ್ನುಗಳಿಂದ ಕೂಡಿದ್ದ ರೈಲನ್ನು ಶೋಧಿಸಲು ಸ್ಟೇಷನ್ನಲ್ಲೇ ಯಂತ್ರ ಸಾಮಗ್ರಿ ಪತ್ತೆಯಾಯಿತು.

ಪ್ರಭಾತ ಕಾಂಪಿಟಿಷನ್ ನಂ. 16

ಪ್ರಥಮ ಬಹುಮಾನ ರೂ. 200 ಇತರ ಬಹುಮಾನ 1, 2, 3 ಕ್ಕೆ ಗಳಿಗೆ. 150 ಕಡೆಯ ತಾರೀಖು 14-11-47

ಪ್ರೋತ್ಸಾಹ ಬಹುಮಾನ ರೂ. 25 ಉತ್ತರ ಸತ್ಯವಾದಿಯಲ್ಲಿ ತಾ|| 15-11-47



ಮ್ಯಾನೇಜರ ತೀರ್ಮಾನಕ್ಕೆ ಒಪ್ಪಿದ್ದೇನೆ.

ಹೆಸರು.....

ವಿಳಾಸ.....

ಎಡದಿಂದ ಬಲಕ್ಕೆ

1 ಈ ಹಬ್ಬದಲ್ಲಿ ಭಗವಂತನು ಸಕಲರಿಗೂ ಸಸ್ಯಂಗಳನ್ನುಂಟುಮಾಡಲೆಂದು ಕೋರುತ್ತೇವೆ. 3 ತಮ್ಮ....ದ ವೇಲೆ ಮೋಹವಿಲ್ಲದವನೂ ಉಂಟೇ? 7 ಒಳ್ಳೆಯ ಇದು ದೊರಕಬೇಕಾದರೆ ಪುಣ್ಯವಿಶೇಷವಿರಬೇಕು. 8 ಇದು ಕಠಿಣಮನಸ್ಸನ್ನೂ ಕರಗಿಸಬಲ್ಲದು.

ಮೇಲಿನಿಂದ ಕೆಳಕ್ಕೆ

2 ತನ್ನ ಹೆಂಡತಿಯು .... ವಿಷಯವನ್ನು ಕೇಳಿದವನಿಗೆ ಮನಸ್ಸು ಕಳವಳಕ್ಕೆ ಈಡಾಗುವುದು ಸಹಜವೇ ಸರಿ. 4 ತ್ರಿಮೂರ್ತಿಗಳಲ್ಲೊಬ್ಬರು 5 ಮನುಷ್ಯನಿಗೆ ಮುಖ್ಯವಾಗಿಬೇಕಾಬೇಕು. 6ಹಿಂದು ಪ್ರಾಣಿ.

ವಿಳಾಸ— ಮ್ಯಾನೇಜರ್ ಪ್ರಭಾತ ಕಾಂಪಿಟಿಷನ್

ಕೊತ್ವಾಲ ರಾಮಯ್ಯ ಸ್ಟ್ರೀಟ್ ಮೈಸೂರು

ನಿಯಮಗಳು— 1 ಉತ್ತರಕ್ಕೆ 8 ಆಣೆ 5 ಕ್ಕೆ 1 ರೂ. 12 ಕ್ಕೆ 2 ರೂ. ಈ ಪ್ರಕಾರ ಎಷ್ಟು ಬೇಕಾದರೂ ಕಳುಹಿಸಬಹುದು. ಪ್ರವೇಶಧನಕ್ಕೆ ಮಣಿಯಾರ್ಡರು ಅಥವಾ ಪೋಸ್ಟಲ್ ಆರ್ಡರು ಕಳುಹಿಸಬಹುದು (ಕ್ಯಾಸ್ ಮಾಡಕೂಡದು) ದೇವರಾಜ ಪೋ ಆಫೀಸು ಎಂದೇ ಬರೆಯಬೇಕು. ಉತ್ತರಗಳನ್ನು ಖಾಲೀ ಕಾಗದದಲ್ಲೂ ಬರೆಯಬಹುದು. ಬಹುಮಾನಿತರ ಪಟ್ಟಿಗೆ 0-1-0 ಸ್ಟಾಂಪು ಕಳಿಸಬೇಕು ಸ್ಪರ್ಧೆಯಲ್ಲಿ ಭಾಗವಹಿಸಿದವರಿಗೆ ಮಾತ್ರ ಉತ್ತರವಿರುವ 'ಸತ್ಯವಾದಿ' ಯನ್ನು ಕಳುಹಿಸಲಾಗುತ್ತೆ.

ಶ್ರೀ 'ಓಂ' ಗುರುತಿನ

ಆರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಆರಿಸಿಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ವಿವಾಹಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತೀದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್ ಪಾಲ್

(ಹಿಂಗು. ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

SHAKTI SUDHA

Woodlands

From 31-10-47

ಅಶೋಕಕುಮಾರ್

ವೀರಾ, ಪ್ಯಾರೊ, ಪಾಶ್ಚವಹಿಸಿರುವ

ಶಿಕಾರಿ

(ಅವೋಘ ಹಿಂದಿ ಚಿತ್ರ)

ಪ್ರತಿ ದಿನ 3 ಆಟಗಳು

Woodlands

Morning Shows at 10-30

From 31—10—47 For 7 days

The Black Panther

— starring —

Frankies Thomas

Frances Robinson

Jack Mulhall

Alseean

At Opera!

2nd Glorious Week

MAD-MAN

.... with —

N.S.Krishnan, T A Maduram